



ಹನುಮನನ್ನು ಭೇಟಿ ಮಾಡಿದ ಭೀಮ
ಕಥೆ: ಆರ್.ವಿ.
ಚಿತ್ರ: ಶಂಕರ್
ಹಿಮಾಲಯ, ಪರ್ವತಗಳ ರಾಜ. ಸಾಧನೆಗೆ ಉತ್ತಮ ಸ್ಥಳ ಹಾಗೂ ದೇವತೆಗಳ ವಾಸಸ್ಥಾನ ಎಂದು ಪ್ರಸಿದ್ಧ. ಹಿಮಾಲಯದಲ್ಲಿ ನಾರಾಯಣಾಶ್ರಮ ಎಂಬುದು ಒಂದು ಪುಣ್ಯ ಸ್ಥಳ. ಅಲ್ಲಿ ಅನೇಕ ಸಾಧು, ಸಂನ್ಯಾಸಿಗಳು ತಪಸ್ಸಿನಲ್ಲಿ ತಮ್ಮ ಜೀವನವನ್ನೆಲ್ಲ ಸಂತೋಷದಿಂದ ಕಳೆದಿದ್ದಾರೆ. ತಮ್ಮ ವನವಾಸ ಸಮಯದಲ್ಲಿ ಪಾಂಡವರೂ ಅಲ್ಲಿಗೆ ಒಮ್ಮೆ ಹೋದರು.
ಋಷಿಗಳೆಲ್ಲ ಅವರನ್ನು ತುಂಬ ಸಂತೋಷದಿಂದ ಸ್ವಾಗತಿಸಿದರು.
1
ಓ. ಮಹಾರಾಜ ಯುಧಿಷ್ಠಿರ, ನೀವುಗಳು ಕೆಲವು ದಿನಗಳನ್ನು ಆನಂದದಿಂದ ಇಲ್ಲಿ ಕಳೆಯಿರಿ.
ನಿಮ್ಮ ಆಮಂತ್ರಣದಿಂದ ನಾವು ಕೃತಾರ್ಥರಾಗಿದ್ದೇವೆ. ನಿಮ್ಮೊಡನೆ ಇರುವುದು ನಮ್ಮ ಸೌಭಾಗ್ಯ.
ಅಂತೆಯೇ ಪಾಂಡವರು ಕೆಲವು ದಿನ ಅಲ್ಲೇ ಇದ್ದರು. ಒಂದು ದಿನ ದ್ರೌಪದಿ ಅವರ ಪರ್ಣಶಾಲೆಯ ಮುಂದಿದ್ದ ನದಿಯಲ್ಲಿ ಒಂದು ಕಮಲ ಪುಷ್ಪ ತೇಲುತ್ತಿರುವುದನ್ನು ಕಂಡಳು.
2
ಆಹಾ! ಸಾವಿರದಳದ ಈ ಕಮಲ ಎಷ್ಟು ಸುಂದರವಾಗಿದೆ! ಎಂತಹ ಅದ್ಭುತ ಪರಿಮಳ ಬೀರುತ್ತಿದೆ !
ಅಂತಹ ಹೂಗಳನ್ನು ಮತ್ತಷ್ಟು ಪಡೆಯಬೇಕು ಎಂಬ ಆಸೆಯಿಂದ ಅವಳು ಭೀಮನ ಬಳಿ ಬಂದಳು.
3
ಭೀಮಾ! ನೋಡು, ಈ ಹೂ ಎಷ್ಟು ಸುಂದರವಾಗಿದೆ! ನನಗೆ ಇನ್ನೂ ಹೆಚ್ಚು ಹೂವುಗಳು ಸಿಕ್ಕಿದರೆ, ಅವುಗಳಿಂದ ನಾವು ಈ ಋಷಿಗಳನ್ನು ಪೂಜಿಸಬಹುದು.
ನೀನು ತುಂಬಾ ಅಪರೂಪವಾಗಿ ಏನನ್ನಾದರೂ ಇಚ್ಛಿಸುವೆ. ಆದುದರಿಂದ ನಿನ್ನ ಈ ಅಲ್ಪ ಆಸೆಯನ್ನು ನೆರವೇರಿಸುವುದು ನನ್ನ ಕರ್ತವ್ಯ.


ಭೀಮ ಆ ವಿಚಿತ್ರವಾದ ಕಮಲವನ್ನು ಹುಡುಕುತ್ತಾ ಹೊರಟನು.
4
ಏನಿದು? ಗಂಧಮಾದನ ಪರ್ವತವೆ? ಎಷ್ಟೊಂದು ರೀತಿಯ ಹೂಗಳಿವೆ? ಹೂವುಗಳಿಂದ ತುಂಬಿರುವ ಇಂತಹ ಕಣಿವೆಯನ್ನು ನಾನು ಎಂದೂ ನೋಡಿಲ್ಲ.
ಹೂವುಗಳ ಸುಗಂಧ ಪರಿಮಳ ಅವನನ್ನು ಮೈಮರೆಸಿತು. ಆದರೂ ತಾನು ಬಂದ ಕಾರ್ಯವನ್ನು ಭೀಮ ಮರೆಯಲಿಲ್ಲ.
5
ಅವಳು ಬಯಸಿದ ಆ ವಿಶೇಷ ಹೂ ಎಲ್ಲೂ ಕಾಣಿಸುತ್ತಿಲ್ಲವಲ್ಲ. ಅವಳಿಗೆ ಪಾಪ ನಿರಾಶೆಯಾಗುವುದಲ್ಲ.
ಹಾಗೇ ಹೋಗುತ್ತಿದ್ದಾಗ ಒಂದು ಬಾಳೆಯ ತೋಪು ಸಿಕ್ಕಿತು. ಅದರ ರಸ್ತೆಯಲ್ಲಿ ವೀರ ಆಂಜನೇಯ, ಶ್ರೀರಾಮನ ಹೆಸರನ್ನು ಉಚ್ಚರಿಸುತ್ತ ಕುಳಿತಿದ್ದ. ಅವನು ಭೀಮನ ಅಣ್ಣ.
ರಾಮ! ರಾಮ! ರಾಮ!
6
ಭೀಮನ ಹೆಜ್ಜೆಯ ಸಪ್ಪಳ ಕೇಳಿ ಅಕ್ಕಪಕ್ಕದಲ್ಲಿದ್ದ ಕಾಡುಮೃಗಗಳೆಲ್ಲಾ ಅತ್ತ ಇತ್ತ ಚೆದುರಿದವು.
7
ಆ ಶಬ್ದದಿಂದ ವಿಚಲಿತನಾದ ಹನುಮಂತನು ಮೆಲ್ಲನೆ ಕಣ್ಣು ತೆರೆದ.
ಓಹೋ, ನನ್ನ ತಮ್ಮ ಬರುತ್ತಿದ್ದಾನೆ. ಅವನನ್ನು ಸ್ವಲ್ಪ ಕೀಟಲೆ ಮಾಡೋಣ.
8



ಹನುಮಂತನು ತನ್ನ ಬಾಲವನ್ನು ನೆಲಕ್ಕೆ ಅಪ್ಪಳಿಸಿದನು. ಅದು ಭಯಂಕರ ಶಬ್ದವನ್ನು ಉಂಟುಮಾಡಿತು. ಭೀಮ ಆಶ್ಚರ್ಯದಿಂದ ಅತ್ತ ನೋಡಿದ.
9
ನೀನು ಯಾರು? ಇಲ್ಲಿಗೇಕೆ ಬಂದಿರುವೆ?
ನಾನು ಕುಂತಿಯ ಮಗ. ನನ್ನನ್ನು ಭೀಮ ಎಂದು ಕರೆಯುತ್ತಾರೆ. ಆದರೆ ನೀನು ಯಾರು?
10
ಅದಿರಲಿ, ಇದು ನನಗೆ ಸೇರಿದ ಸ್ಥಳ. ಬಂದದ್ದಕ್ಕೆ ಸ್ವಲ್ಪ ಹಣ್ಣು ತಿಂದು ಹೊರಡು. ನಾನೊಬ್ಬ ಮುದಿ ವಾನರ. ಇಲ್ಲಿಂದ ಮುಂದೆ ಹೋಗುವುದು ನಿಷಿದ್ಧ. ನನಗೆ ತೊಂದರೆ ಕೊಡದೆ ಬಂದ ದಾರಿಯಲ್ಲಿ ಹಿಂದಿರುಗು.
ಓ! ವಾನರನೇ! ನನಗೆ ಯಾರ ಭಯವೂ ಇಲ್ಲ. ನನಗೆ ಮುಂದೆ ಹೋಗಲು ದಾರಿ ಬಿಡು. ಇಲ್ಲದಿದ್ದಲ್ಲಿ ನಿನ್ನನ್ನು ಶಿಕ್ಷಿಸಬೇಕಾಗುತ್ತದೆ.
11
ಭೀಮಾ! ನೀನೇ ನೋಡುತ್ತಿದ್ದೀಯಲ್ಲಾ ನಾನು ತುಂಬಾ ಮುದುಕ. ನನ್ನ ಬಾಲವನ್ನು ದಾಟಿ ಹೋಗು.
ನೀನೊಬ್ಬ ಗೌರವಯುತವಾದ ವ್ಯಕ್ತಿಯಂತೆ ಕಂಡು ಬರುತ್ತಿದ್ದೀಯೆ. ನೀನು ಸಾಧಾರಣ ಕೋತಿಯಾಗಿದ್ದರೆ ಹನುಮಂತ ಸಮುದ್ರವನ್ನು ದಾಟಿದಂತೆ ನಾನೂ ನಿನ್ನನ್ನು ದಾಟಿ ಹೋಗುತ್ತಿದ್ದೆ. ಪಕ್ಕಕ್ಕೆ ಸರಿದು ನಿನ್ನ ಬಾಲವನ್ನು ಎಳೆದುಕೊ. ಇಲ್ಲದಿದ್ದರೆ ನಿನ್ನೊಡನೆ ಬೇರೆ ರೀತಿಯಾಗಿ ವರ್ತಿಸಬೇಕಾಗುತ್ತದೆ.
ಹನುಮಂತ ಹೆದರಿದಂತೆ ನಟಿಸಿ.....
12
ಓ, ವೀರಾಗ್ರೇಸರ, ನನ್ನಿಂದ ಜರುಗಲು ಶಕ್ತಿಯಿಲ್ಲ. ಆದುದರಿಂದ ನನ್ನ ಬಾಲವನ್ನು ಸ್ವಲ್ಪ ಪಕ್ಕಕ್ಕೆ ಸರಿಸಿ ಮುಂದೆ ಹೋಗು.
ನಿನ್ನ ಬಾಲ ಹಿಡಿದು ಅದರಿಂದಲೇ ನಿನ್ನನ್ನು ಪಕ್ಕಕ್ಕೆ ಎಸೆಯುತ್ತೇನೆ.
ಭೀಮ ತನ್ನ ಕಾಲಿನಿಂದ ಬಾಲವನ್ನು ತಳ್ಳಿದನು. ಆದರೆ ಅದು ಸ್ವಲ್ಪವೂ ಅಲುಗಾಡಲಿಲ್ಲ ನಂತರ ತನ್ನ ಎರಡೂ ಕೈಗಳಿಂದ ಅದನ್ನು ಎತ್ತಲು ಪ್ರಯತ್ನಪಟ್ಟನು. ಆದರೂ ಏನೂ ಆಗಲಿಲ್ಲ. ಕೊನೆಗೆ ತನ್ನೆಲ್ಲಾ ಶಕ್ತಿಯನ್ನು ಉಪಯೋಗಿಸಿ ಬಾಲವನ್ನು ತಳ್ಳಲು ಪ್ರಯತ್ನಿಸಿದ. ಆದರೆ ಒಂದು ಅಂಗುಲ ಕೂಡ ಅಲುಗಿಸಲಾಗಲಿಲ್ಲ. ಕೊನೆಗೆ...
13
ಸ್ವಾಮಿ! ತಾವು ಯಾರೋ ಮಹಾತ್ಮರೇ ಇರಬೇಕು. ದಯವಿಟ್ಟು ತಾವು ಯಾರೆಂದು ತಿಳಿಸಿ.



ಹನುಮಂತನು, ಪರಿತಪಿಸುತ್ತಿದ್ದ ಭೀಮನ ಕಡೆ ನೋಡಿ...
ಭೀಮಾ! ನಾನು ಬೇರೆ ಯಾರೂ ಅಲ್ಲ, ನಿನ್ನ ಸೋದರ ಹನುಮಂತ. ನೀನು ಹುಡುಕುತ್ತಿರುವ ಕೊಳ ಪಕ್ಕದಲ್ಲೇ ಇದೆ. ಹೋಗಿ ಹೂವುಗಳನ್ನು ಸಂಗ್ರಹಿಸಿಕೊ.
ಅಣ್ಣಾ. ನನ್ನ ಉದ್ಧಟತನವನ್ನು ದಯವಿಟ್ಟು ಕ್ಷಮಿಸು. ನಿನ್ನ ವಿಶ್ವರೂಪವನ್ನು ನೋಡಬೇಕೆಂದು ನನಗೆ ಬಹಳ ದಿನಗಳ ಆಸೆ. ಕೃಪೆ ಮಾಡಿ, ತೋರಿಸಿ ಆಶೀರ್ವದಿಸು.
ಮತ್ತೆ ಮತ್ತೆ ಬೇಡಿಕೊಂಡ ನಂತರ, ಹನುಮಂತನು ಆಕಾಶದೆತ್ತರ ಬೆಳೆದು, ತನ್ನ ವಿಶ್ವರೂಪವನ್ನು ತೋರಿಸಿದ. ಭೀಮ ಗೌರವದಿಂದ ತಲೆಬಾಗಿ ನಮಸ್ಕರಿಸಿದ. ಹನುಮಂತ ಅವನನ್ನು ಆಶೀರ್ವದಿಸಿದ.
ಭಗವಂತಾ! ನಿಜಕ್ಕೂ ನಾನು ಧನ್ಯನಾದೆ.
ಭೀಮಾ ಹಿರಿಯರನ್ನು ಗೌರವಿಸಬೇಕು ನಿನ್ನ ಕರ್ತವ್ಯದಲ್ಲಿ ನಿಷ್ಠೆಯಿಂದಿರು. ನಿನ್ನ ಪ್ರಯತ್ನಗಳಲ್ಲಿ ಭಗವಂತ ನಿನಗೆ ಸಹಾಯ ಮಾಡಲಿ, ಹತ್ತಿರದಲ್ಲೇ ಕುಬೇರನ ಕೊಳವಿದೆ. ನೀನು ಹುಡುಕುತ್ತಿರುವ ಪುಷ್ಪಗಳು ಅಲ್ಲಿ ಹೇರಳವಾಗಿವೆ.
ಭೀಮ ಅಲ್ಲಿಗೆ ಹೋಗಿ ಬೇಕಾದಷ್ಟು ಹೂವುಗಳನ್ನು ಕಿತ್ತು ಹಿಂದಿರುಗಿದ.
ದ್ರೌಪದಿ! ಇಂದು ನನ್ನ ಸುದಿನ. ನನಗೆ ಕಾಡಿನಲ್ಲಿ ನನ್ನ ಅಣ್ಣ ಹನುಮಂತನ ಭೇಟಿ ಆಯಿತು. ಅವನ ಸಹಾಯದಿಂದಲೇ ಈ ಹೂವುಗಳು ದೊರೆತವು.